ಏತ ನೀರಾವರಿ ಯೋಜನೆಗಳು

೧೨೫೯ ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ).—ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಏತ ನೀರಾವರಿ ಯೋಜನೆಗಳಿಷ್ಟು

ಆ) ಈ ಯೋಜನೆಗಳಿಂದ ನೀರಾವರಿ ಆಗುತ್ತಿರುವ ಅಚ್ಚುಕಟ್ಟು ಎಷ್ಟು ?

ಇ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಗಂಗಾ ಕಲ್ಯಾಣ ಯೋಜನೆಗಳಿಷ್ಟು ?

ಈ) ಈ ಯೋಜನೆಗಳಡಿಯಲ್ಲಿ ನೀರಾವರಿ ಆಗುತ್ತಿರುವ ಅಚ್ಚುಕಟ್ಟು ಎಷ್ಟು ?

ಉ) ೧೯೮೫-೮೬ನೇ ಮತ್ತು ೧೯೮೬-೮೭ನೇ ವರ್ಷಗಳಲ್ಲಿ ಸರ್ಕಾರವು ಏತ ನೀರಾವರಿ ಯೋಜನೆ ಮತ್ತು ಗಂಗಾ ಕಲ್ಯಾಣ ಯೋಜನೆಗಳನ್ನು ತೆಗೆದುಕೊಳ್ಳುವ ಪ್ರಸ್ತಾಪನೆ ಇದೆಯೇ ?

ಊ) ಜಮೀನು ವ್ಯವಸಾಯ ಮಳಿಯಿಂದ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—

ಅ) ಯಾವುದೂ ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಯಾವುದೂ ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ೧) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಏತ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಲು ಅವಕಾಶವಿರುವುದಿಲ್ಲ.

೨) ೧೨ ಗಂಗಾ ಕಲ್ಯಾಣ ಯೋಜನೆಯನ್ನು ಈ ಕ್ಷೇತ್ರದಲ್ಲಿ ಗುರುತಿಸಲಾಗಿದ್ದು ಅವು ಪರಿಶೀಲನೆಯಲ್ಲಿವೆ.

ಊ) ಹೌದು.

ಮೈಸೂರಿನಲ್ಲಿರುವ ಸರ್ಕಾರಿ ಸಹಕಾರಿ ಉರುವಲು ಸಂಘಗಳ ಸಂಖ್ಯೆ

೬೦೬ ಶ್ರೀಮತಿ ಮುಕ್ತಾರ್ ಉನ್ನಿಸಾ (ನರಸಿಂಹರಾಜ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಮೈಸೂರಿನಲ್ಲಿರುವ ಸರ್ಕಾರಿ ಸಹಕಾರಿ ಉರುವಲು ಸಂಘಗಳ ಸಂಖ್ಯೆ ಮತ್ತು ಈ ಸಂಘಗಳಿಗೆ ಸರ್ಕಾರವು ಉರುವಲನ್ನು ಸರಬರಾಜು ಮಾಡುತ್ತಿದೆಯೇ ?

ಆ) ಹಾಗಾದರೆ, ಸರ್ಕಾರದಿಂದ ಅವರು ಎಷ್ಟು ಕಾಲದಿಂದ ಉರುವಲು ಸೌದೆಯನ್ನು ಪಡೆಯುತ್ತಿಲ್ಲ ಮತ್ತು ಅವುಗಳಿಗೆ ಉರುವಲನ್ನು ಸರಬರಾಜು ಮಾಡಲಾಗುತ್ತಿದೆಯೇ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

ಅ) ಮೈಸೂರಿನಲ್ಲಿ ಸರ್ಕಾರದ ಸಹಕಾರಿ ಉರುವಲು ಸೌದೆ ಸಂಘಗಳಿರುವುದಿಲ್ಲ. ಆದರೆ ಮೈಸೂರಿನಲ್ಲಿ ಉರುವಲು ಸೌದೆಯ ೭ ಸಹಕಾರಿ ಸಂಘಗಳಿರುತ್ತವೆ. ಅವುಗಳಿಗೆ ನೀಲಗಿರಿ ಉರುವಲನ್ನು ಕಾಲ ಕಾಲಕ್ಕೆ ಒದಗಿಸಲಾಗುತ್ತಿದೆ.

ಆ) ೧೯೮೫ನೇ ಸೆಪ್ಟೆಂಬರ್ ತಿಂಗಳಿನಿಂದ ಈ ಸಂಘಗಳಿಗೆ ಉರುವಲನ್ನು ಸರಬರಾಜು ಮಾಡಲಾಗಿರುವುದಿಲ್ಲ ಮಾದಹಳ್ಳಿ ನೆಡು ತೋಪು ಕೇಂದ್ರದಲ್ಲಿ ೧೯೭೬ರಲ್ಲಿ ನಾಟಿ ಮಾಡಿರುವ ನೀಲಗಿರಿ ನೆಡುತೋಪಿನಿಂದ ಈಗ ತೆಗೆಯಲಾಗುವ ನೀಲಗಿರಿ ಸೌದೆಯನ್ನು ಈ ಸಂಘಗಳಿಗೆ ಶೀಘ್ರದಲ್ಲಿಯೇ ಒದಗಿಸಲಾಗುವುದು.